# ಕಬ್ಬಿನಲ್ಲಿ ಅಳವಡಿಸಬೇಕಾದ ಬೇಸಾಯ ಕ್ರಮಗಳು

**ನಾಟಿ ಮಾಡುವ ಪದ್ಧತಿ :**

ಕಬ್ಬಿನ ಇಳುವರಿಯನ್ನು ಹೆಚ್ಚು ಮಾಡಿ ಕಡಿಮೆ ಖರ್ಚು ಮಾಡುವ ಸಲುವಾಗಿ ಸುಧಾರಿತ ಬೆಳೆಯ ಸಾಲಿನ ಪರಿವರ್ತನೆ ನಾಡಿ ಮಾಡುವ ಪದ್ಧತಿ ಮತ್ತು ಬೀಜದ ಬಳಕೆಯ ಪ್ರಮಾಣಗಳು ಬಹಳ ಪ್ರಮುಖ ಪಾತ್ರವಹಿಸಿವೆ. ಸರಿಯಾದ ನಾಟಿ ಮಾಡಿದ ಪದ್ಧತಿ ಮತ್ತು ಉತ್ತಮ ಸಸ್ಯ ಸಂಖ್ಯೆ ಕಾಪಾಡುವುದರಿಂದ ಮೂಲ ವಸ್ತುಗಳ ಉಪಯೋಗ ಚೆನ್ನಾಗಿ ಆಗುವದು. ಬಹುತೇಕ ಕಬ್ಬು ಬೆಳೆಯುವ ದೇಶಗಳಲ್ಲಿ ಕಬ್ಬನ್ನು ಸಾಲುಗಳಲ್ಲಿ ಬೆಳೆಯುವುದರಿಂದ ಸಾಲಿನಲ್ಲಿ ಬೆಳೆಯ ಅಂತರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇಲ್ಲ.

ಕಬ್ಬನ್ನು ಭಾರತದಲ್ಲಿ ಸಾಮಾನ್ಯವಾಗಿ ಎರಡು ಪದ್ಧತಿಯಲ್ಲಿ ನಾಟಿ ಮಾಡಬಹುದು. ಈ ಪದ್ಧತಿಯ ನೀರಾವರಿಯಲ್ಲಿಯ ಕಬ್ಬಿನ ಬೇಸಾಯಕ್ಕೆ ಉತ್ತಮವೆನಿಸಿದೆ ಈ ಪದ್ಧತಿಯಿಂದ ನೀರನ್ನು ಸರಿಯಾಗಿ ಬಳಸಲು ಅನುಕೂಲವಾಗುವುದಲ್ಲದೇ ಹವೆಯಾಡಿ ಸರಿಯಾಗಿ ಬೋದು ಎರಿಸಿದರೆ ಸಸಿಗೆ ಉತ್ತಮ ಆಧಾರವಾಗಲು ಸಹಾಯವಾಗುವದು.

1. ಸಾಲು ಬೋದು ಪದ್ಧತಿ
2. ಸಮತಟ್ಟಾದ ನಾಟಿ ಪದ್ಧತಿ

ಇದಲ್ಲದೆ ನಾಟಿಗೆ ಕೆಲವು ವಿಶೇಷವಾದ ಪದ್ಧತಿಗಳನ್ನು ಸಹ ಅಳವಡಿಸಿಕೊಳ್ಳಬಹುದು. ಅವುಗಳಲ್ಲಿ ಮುಖ್ಯವಾಗಿ ಕಾಲುವೆ **(Trench System)** ಆಳವಾದ ತಗ್ಗಿನ ಪದ್ಧತಿ **(Deep Trench System)** ಜೋಡು ಸಾಲು ಪದ್ಧತಿ ಮತ್ತು ಗುಂಡಿ ಪದ್ಧತಿ.

**ಬೋದು ಸಾಲು ಪದ್ಧತಿ :**

ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ ಬೋದು ಸಾಲುಗಳನ್ನು 3 ಅಡಿ ಅಂತರಗಳಲ್ಲಿ (ಬೋದಿನಿಂದ ಬೋದಿಗೆ) ತೆಗೆದು ಈ ಪದ್ಧತಿಯಲ್ಲಿ ನಾಟಿ ಮಾಡಲಾಗುತ್ತದೆ. ಇದನ್ನು ಟ್ರ್ಯಾಕ್ಟರ ಅಥವಾ ಎತ್ತುಗಳ ಸಹಾಯದಿಂದ ಬೋದು ಮಾಡುವ ಯಂತ್ರ ಉಪಯೋಗಿಸಿ ತೆಗೆಯಬಹುದು. ಆದರೆ ಸರಿಯಾದ ಆಳವನ್ನು ಸಮನಾಗಿ ಕಾಯ್ದುಕೊಳ್ಳಲು ಟ್ರ್ಯಾಕ್ಟರ ಉಪಕರಣ ಹೆಚ್ಚು ಅನುಕೂಲ.

ಅಗುಲವಾದ ಹೆಚ್ಚು ಮರಿ ಒಡೆಯುವ ತಳಿಗಳಿಗೆ ಸಾಲುಗಳು (120 ಸೆಂ.ಮೀ) ಹೆಚ್ಚು ಫಲವತ್ತತೆ ಹಾಗೂ ನೀರಾವರಿ ಸೌಕರ್ಯ ಚೆನ್ನಾಗಿರುವ ಮತ್ತು ತಳಿಗಳಿಗೆ ಉತ್ತಮ. ಸಾಲುಗಳ ಆಳ 25 ಸೆಂ.ಮೀ. ಇದ್ದರೆ ಸಾಕು. ಇಳಿಜಾರಿಗೆ ಅನುಸಾರವಾಗಿ ಸಾಲಿನ ಉದ್ದವನ್ನು ಪರಿಗಣಿಸಬೇಕೆ ಆದರೆ ಸಾಮಾನ್ಯವಾಗಿ 10–15 ಮೀಟರ್ ಉದ್ದದ ಸಾಲುಗಳು ಹೆಚ್ಚು ಸೂಕ್ತ. ಹೆಚ್ಚು ನೀರು ನಿಲ್ಲುವ ಪ್ರದೇಶವಿದ್ದರೆ ಬಸಿಗಾಲುವೆಗಳನ್ನು ಮಾಡಬೇಕು. ನೀರಾವರಿ ಸೌಕರ್ಯ ಚೆನ್ನಾಗಿರುವ ಪರಿಸ್ಥಿತಿಯಲ್ಲಿ ಈ ಪದ್ಧತಿಯನ್ನು ಅಳವಡಿಸಬಹುದು. ಈ ಪದ್ಧತಿಯಲ್ಲಿ ನೀರಾವರಿ ಸುಲಭ, ಗಾಳಿಯಾಡುವಿಕೆಗೆ ಅನುಕೂಲವಾಗುತ್ತದೆ ಮಣ್ಣನ್ನು ಏರು ಹಾಕಲು ಸುಲಭವಾಗಿ ಗಿಡಗಳಿಗೆ ಒಳ್ಳೆಯ ಆಧಾರವಾಗುತ್ತದೆ ಮತ್ತು ಕಬ್ಬು ಕೆಳಗೆ ಬೀಳುವುದಿಲ್ಲ.

**ಸಮತಟ್ಟಾದ ನಾಟಿ :**

ಈ ಪದ್ಧತಿಯನ್ನು ಉತ್ತರ ಭಾರತದಲ್ಲಿ ಉಪಯೋಗಿಸಲಾಗುತ್ತಿದೆ. ಈ ಪದ್ಧತಿ ಕಡಿಮೆ ನೀರಿರುವ ಪ್ರದೇಶದಲ್ಲಿ ಅಳವಡಿಸಲಾಗುತ್ತದೆ. ಭೂಮಿಯನ್ನು ಚೆನ್ನಾಗಿ ಹದ ಮಾಡಿ (ನೇಗಿಲಿನಿಂದ) ಹಲಗೆಯನ್ನು ಹೊಡೆದು ಸಮತಟ್ಟಾಗಿ ಮಾಡಲಾಗುತ್ತದೆ. ನೀರನ್ನು ಸಂರಕ್ಷಿಸುವ ದೃಷ್ಟಿಯಿಂದ ಈ ಪದ್ಧತಿ ಅಳವಡಿಸಬಹುದು. ಸತತವಾಗಿ ಉಳುಮೆ ಮಾಡುವುದರಿಂದ ಕೆಳ ಪದರದಲ್ಲಿರುವ ಕ್ಯಾಪಿಲ್ಲರಿ ರಂಧ್ರಗಳು ತುಂಡಾಗಿ ಭೂಮಿಯ ಮೇಲ್ಮೈಯಲ್ಲಿ ಮಣ್ಣಿನ ಹೊದಿಕೆಯಾದಂತಾಗುತ್ತದೆ. ಹೆಚ್ಚು ಆಳವಿಲ್ಲದ ಸಾಲು ತೆಗೆದು ಕಬ್ಬನ್ನು ನಾಟಿ ಮಾಡಬಹುದು. ಈ ಬೆಳೆಗೆ ಕೇವಲ 6–8 ನೀರಾವರಿಯನ್ನು ಮಾತ್ರ ಕೊಡಲಾಗುತ್ತದೆ. ಮಳೆಯಾದ ನಂತರ ರಸಗೊಬ್ಬರವನ್ನು ಕೊಡಬಹುದು. ಈ ಪದ್ಧತಿಯಲ್ಲಿ ದೇಶಿಯ ನೇಗಿಲಿನಿಂದ ಉಳುಮೆ ಮಾಡಿ ಕಟ್ಟಿಗೆ ಹಲಗೆಯಿಂದ ಸಿಲವನ್ನು ಗಟ್ಟಿ ಮಾಡಿ ನೀರಿನ ತೇವಾಂಶ ಸಂಗ್ರಹಿಸಲು ಉಪಯೋಗಿಸಲಾಗುತ್ತದೆ. ಪದೇ ಪದೇ

ನೇಗಿಲು ಹಾಯಿಸುವುದರಿಂದ ಮಣ್ಣಿನ ಕಣಗಳು ಒಡೆದು ಅವು ಮಣ್ಣಿಗೆ ಹೊದಿಕೆಯಾಗಿ ಕಾರ್ಯನಿರ್ವಹಿಸುತ್ತವೆ. ನಾಟಿ ಮಾಡುವಾಗ ಕಡಿಮೆ ಅಂತರದ ಸಾಲುಗಳಲ್ಲಿ ಬೀಜಗಳನ್ನು ಬಿಟ್ಟು ಕಟ್ಟಿಗೆ ಹಲಗೆಯಿಂದ ಮಣ್ಣು ಮುಚ್ಚಲಾಗುವದು. ಕಬ್ಬು ತನ್ನ ಅವಧಿಯಲ್ಲಿ ಕೇವಲ 6–8 ನೀರನ್ನು ಪಡೆಯುತ್ತದೆ. ಗೊಬ್ಬರ ಮತ್ತು ಇತರ ಬೇಸಾಯ ಕ್ರಮಗಳನ್ನು ನೈರುತ್ಯ ಮಳೆ ಬಂದ ನಂತರ ಜೂನ ತಿಂಗಳಲ್ಲಿ ಕೈಗೊಳ್ಳಲಾಗುವದು.

ತಗ್ಗು ಕಾಲುವೆ ಪದ್ಧತಿ :

ಈ ಪದ್ಧತಿಯನ್ನು ತೀರ ಪ್ರದೇಶಗಳಲ್ಲಿ (ಆಂಧ್ರ ಪ್ರದೇಶ ರಾಜ್ಯದ) ಕಪ್ಪು ಭೂಮಿಯಲ್ಲಿ ಹೆಂಟೆಗಳಲ್ಲಿ ಅಳವಡಿಸಲಾಗುತ್ತದೆ. ಈ ಪದ್ಧತಿಯಲ್ಲಿ ಇಂಗ್ಲೀಷ ಅಕ್ಷರ ಆಕಾರದ 25–30 ಸೆಂ.ಮೀ. ಆಳದ ತಗ್ಗಿನ ಸಣಿಗೆಯಿಂದ ಹೆಚ್ಚು ತೆಗೆದು ನಾಟಿ ಮಾಡಲಾಗುತ್ತದೆ. ಈ ಪದ್ಧತಿಯನ್ನು ಬೀಳದಂತೆ ಮಾಡಲು ಅನುಸರಿಸುತ್ತಾರೆ.

ಗುಂಡಿ/ಕುಣಿ ಪದ್ಧತಿ :

ಇದನ್ನು ಭಾರತೀಯ ಕಬ್ಬು ಸಂಶೋಧನಾ ಸಂಸ್ಥೆಯಲ್ಲಿ ಅಳವಡಿಸಲಾಗಿದೆ. ವೃತ್ತಾಕಾರದ 90 ಸೆಂ.ಮೀ. ವ್ಯಾಸವುಳ್ಳ 45 ಸೆಂ.ಮೀ. ಆಳದ ಗುಂಡಿಗಳನ್ನು 60 ಸೆಂ.ಮೀ. ಅಂತರದಲ್ಲಿ ತೆಗೆಯಲಾಗುತ್ತದೆ. 15 ಸೆಂ.ಮೀ. ವರೆಗೆ ಗುಂಡಿಗಳನ್ನು ಗೊಬ್ಬರ ಮತ್ತು ಮಣ್ಣಿನಿಂದ ತುಂಬಿಸಬೇಕು. ಹೆಕ್ಟೇರಿಗೆ 4000 ಗುಂಡಿಗಳು ಬರುತ್ತವೆ. ಪ್ರತಿ ಗುಂಡಿಗೆ 20 ಕಬ್ಬಿನ ತುಂಡುಗಳನ್ನು ನಾಟಿ ಮಾಡಬಹುದು. ಕಬ್ಬು ಬೆಳೆದಂತೆ ಮಣ್ಣನ್ನು ಗುಂಡಿಯಲ್ಲಿ ತುಂಬಿಸಬೇಕು. ಚೌಳು ಮತ್ತು ಕ್ಷಾರ ಹಾಗೂ ಮರಳು ಮಣ್ಣಿನಲ್ಲಿ ಈ ಪದ್ಧತಿಯ ಹೆಚ್ಚು ಸೂಕ್ತವಾಗಿರುತ್ತದೆ. ಹನಿ ನೀರಾವರಿ ಅಳವಡಿಸಲು ಸಹ ಈ ಪದ್ಧತಿಯು ಉತ್ತಮ.

ಪಾರ್ಥಾ ಪದ್ಧತಿ ;

ಈ ಪದ್ಧತಿಯ ಖ್ಯಾತ ಕಬ್ಬಿನ ವಿಜ್ಞಾನಿಯಾದ ಶ್ರೀ. ಎಸ್ ವಿ ಪಾದಸಾರಥಿಯವರು ಅಭಿವೃದ್ಧಿಪಡಿಸಿರುತ್ತಾರೆ. ಈ ಪದ್ಧತಿಯನ್ನು ಹೆಚ್ಚು ನೀರು ನಿಲ್ಲುವ ಅಥವಾ ಅಡಿ ತೇವಾಂಶವಿರುವ ಜಮೀನಿಗೆ ಸೂಚಿಸಲಾಗಿದೆ. ಮೂರು ಕಣ್ಣಿನ ಗಣಿಕೆಗಳನ್ನು ಸಾಲಿನಿಂದ 600 ಅಂತರದಲ್ಲಿ ಹಸಿ ಸಾಲಿನ ಬೋದಿನ ಅರ್ಧದಲ್ಲಿ ನಾಟಿ ಮಾಡಲಾಗುವುದು. ಸಾಮಾನ್ಯವಾಗಿ ಒಂದು ಕಣ್ಣು ಮಣ್ಣಿನಲ್ಲಿ ಒಳಗೆ ಇದ್ದು ಇನ್ನೆರಡು ಕಣ್ಣುಗಳು ಮಳೆ ನೀರು ಬಸಿದು ಹೋದಾಗ ಭೂಮಿಗೆ ಸಮನಾಗಿ ಬತ್ತಿ ಮಣ್ಣಿನಲ್ಲಿ ಹಾಕಲಾಗುವುದು. ಈ ಹಂತದಲ್ಲಿ ಕಬ್ಬಿಗೆ ಬೇಕಾಗುವ ಗೊಬ್ಬರವನ್ನು ಕೊಡಲಾಗುವುದು.

ಒಂದೇ ಕಣ್ಣನ್ನು ನಾಟಿ ಮಾಡುವುದು :

ಒಂದೇ ಕಣ್ಣನ್ನು ಕಬ್ಬಿನ ತುಂಡುಗಳನ್ನು ನಾಟಿ ಮಾಡುವುದು ಈ ಪದ್ಧತಿಯ ಪ್ರಮುಖ ಅಂಶ. ಮಣ್ಣಿನಲ್ಲಿ ತೇವಾಂಶ ಸಮರ್ಪಕವಾಗಿದ್ದು ಕಬ್ಬಿನ ತುಂಡುಗಳು ಆರೋಗ್ಯವಾಗಿದ್ದರೆ ಈ ಪದ್ಧತಿಯು ಒಳ್ಳೆಯ ಫಲಿತಾಂಶವನ್ನು ಕೊಡುತ್ತದೆ. ಈ ಪದ್ಧತಿ ವಾತಾವರಣದಲ್ಲಿ ಉಷ್ಣಾಂಶ ಉತ್ತಮವಾಗಿರುವದು ಅವಶ್ಯವಿದೆ.

ಅಂತರದ ನಾಟಿ ವಿಧಾನ **(Spaced Transplanting Technique)** :

ಈ ಪದ್ಧತಿಯಲ್ಲಿ ಒಂದು ಕಣ್ಣಿನ ಕಬ್ಬಿನ ತುಂಡುಗಳನ್ನು ಮಡಿಗಳಲ್ಲಿ ನಾಟಿ ಮಾಡಿ 6 ವಾರಗಳ ನಂತರ ಮುಖ್ಯ ಭೂಮಿಯಲ್ಲಿ ನಾಟಿ ಮಾಡಲಾಗುತ್ತದೆ. ಈ ಪದ್ಧತಿಯಲ್ಲಿ

1. ಬಿತ್ತನೆ ಕಬ್ಬಿನ ಖರ್ಚು ಕಡಿಮೆಯಾಗುತ್ತದೆ. ಪ್ರತಿ ಹೆಕ್ಟೇರಿಗೆ ಕೇವಲ 2–3 ಮೆ. ಟನ್ ಸಾಮಾನ್ಯ ಪದ್ಧತಿಯಲ್ಲಿ 8–10 ಟನ್ ಬೇಕಾಗುತ್ತದೆ.
2. ಒಂದೇ ಕಾಲದಲ್ಲಿ ತೆಂಡೆ ಒಡೆಯುವುದರಿಂದ ಪಕ್ವವಾದ ಕಬ್ಬು ಗಳ ಸಂಖ್ಯೆ ಹೆಚ್ಚಾಗಿ ಸಕ್ಕರೆ ಇಳುವರಿ ಹೆಚ್ಚುತ್ತದೆ.
3. ಮುಖ್ಯ ಭೂಮಿ ತಯಾರು ಮಾಡಲು ಸಮಯ ಹೆಚ್ಚು ಸಿಗುತ್ತದೆ.
4. 2–3 ನೀರಾವರಿಯಲ್ಲಿ ಉಳಿತಾಯವಾಗುತ್ತದೆ.
5. ಗೊಬ್ಬರ ಮತ್ತು ಕಳೆ ನಿರ್ವಹಣೆ ಉತ್ತಮವಾಗುತ್ತದೆ.

**ಪಾಲಿಥೀನ್ ಚೀಲದಲ್ಲಿ ಸಸಿಗಳನ್ನು ಬೆಳೆಸುವ ವಿಧಾನ :**

ಈ ಪದ್ಧತಿಯಲ್ಲಿ 10–15 ಸೆಂ.ಮೀ. ಪಾಲಿಥೀನ್ ಚೀಲಗಳಲ್ಲಿ 1:1:1 ಪ್ರಮಾಣದಲ್ಲಿ ಸಾವಯವ ಗೊಬ್ಬರ, ಮರಳು ಮತ್ತು ಮಣ್ಣಿನ ಮಿಶ್ರಣದಲ್ಲಿ ಒಂದು ಕಣ್ಣಿನ ಕಬ್ಬಿನ ತುಂಡುಗಳನ್ನು ನಾಟಿ ಮಾಡಲಾಗುತ್ತದೆ. ಇದರಿಂದ ಭೂಮಿಯಲ್ಲಿ ಶೇ. 95–99 ರಷ್ಟು ಮೊಳಕೆ ಪ್ರಮಾಣ ಪಡೆಯಬಹುದು.

**ಕಬ್ಬಿನಿಂದ ಕಣ್ಣನ್ನು ತೆಗೆದು ನಾಟಿ ಮಾಡುವದು :**

ಈ ಪದ್ಧತಿಯಲ್ಲಿ ಕಣ್ಣನ್ನು ಸ್ವಲ್ಪ ಕಬ್ಬಿನ ಜೊತೆಯಲ್ಲಿ ತೆಗೆದು ಮಡಿಗಳಲ್ಲಿ ಅಥವಾ ಪಾಲಿಬ್ಯಾಗಿನಲ್ಲಿ ನಾಟಿ ಮಾಡಿ ಸಸಿಗಳನ್ನು ಬೆಳೆಸಲಾಗುತ್ತದೆ. ಈ ಪದ್ಧತಿಯಲ್ಲಿ ಪ್ರತಿ ಹೆಕ್ಟೇರಿಗೆ ಕೇವಲ 1–1.5 ಮೆ.ಟನ್ ಬೀಜಬೇಕಾಗುತ್ತದೆ ಮತ್ತು ಮಣ್ಣು ತೆಗೆದ ನಂತರ ಉಳಿದ ಕಬ್ಬನ್ನು ಕಾರ್ಖಾನೆಗೆ ಕಳುಹಿಸಬಹುದು. ಈ ಪದ್ಧತಿಯ ಹೆಚ್ಚಿನ ಪ್ರಮಾಣದಲ್ಲಿ ಸಸಿಗಳ ಮರಣ ಹೊಂದುವುದರಿಂದ ಅಷ್ಟೊಂದು ಪ್ರಚಲಿತವಾಗಿಲ್ಲ.

**ಜೋಡಿ ಸಾಲು ಪದ್ಧತಿ :**

ಎರಡು ಸಾಲುಗಳನ್ನು ಜೋಡು ಸಾಲುಗಳಾಗಿ ನಾಟಿ ಮಾಡಿ ಎರಡು ಜೋಡಿ ಸಾಲುಗಳ ನಡುವೆ ಹೆಚ್ಚಿನ ಅಂತರ ಕೊಟ್ಟು ನೆಡುವ ಪದ್ಧತಿಗೆ ಜೋಡಿ ಸಾಲು ಪದ್ಧತಿ ಎನ್ನುತ್ತಾರೆ. ಜೋಡಿ ಸಾಲುಗಳ ನಡುವೆ 60 ಸೆಂ.ಮೀ. ಮತ್ತು ಎರಡು ಜೋಡಿಗಳ ನಡುವೆ 120 ಸೆಂ.ಮೀ. ಅಂತರ ಕೊಟ್ಟು ನಾಟಿ ಮಾಡಬಹುದು. ಈ ಜೋಡು ಸಾಲಿನ ಅಂತರವು ಭೂಮಿಯ ಫಲವತ್ತತೆ ಮತ್ತು ಮಣ್ಣಿನ ಗುಣಮಟ್ಟದ ಮೇಲೆ ವ್ಯತ್ಯಾಸ ಮಾಡಬಹುದು. ಅಂತರ ಬೆಳೆಗಳ ಬೇಸಾಯಕ್ಕೆ ಈ ಪದ್ಧತಿಯಲ್ಲಿ ಹೆಚ್ಚಿನ ಪ್ರೋತ್ಸಾಹ ಇದೆ. ಮಣ್ಣನ್ನು ಏರು ಹಾಕಲು ಅನುಕೂಲವಾಗುತ್ತದೆ. ಈ ರೀತಿ ಅಗಲು ಅಥವಾ ಜೋಡು ಸಾಲಿನ ಪದ್ಧತಿಗಳನ್ನು ಅನುಸರಿಸುವಾಗ ಕಬ್ಬಿಗೆ ತಗಲುವ ಇತರ ಬೇಸಾಯ ಕ್ರಮಗಳಾದ ಬೋದು ಎರಿಸುವುದು ನೀರು ಹಾಯಿಸುವುದು ಮತ್ತು ಹುಸಿ ತುಂಬುವಿಕೆಗಳ ಬಗ್ಗೆ ಜಾಗರೂಕತೆ ವಹಿಸಿದರೆ ಮಾತ್ರ ಈ ಪದ್ಧತಿಗಳಲ್ಲಿ ಯಶಸ್ವಿ ಕಾಣಲು ಸಾಧ್ಯ ಇರುವುದರಿಂದ ಕಬ್ಬಿನ ಇಳುವರಿ ಹೆಚ್ಚುವುದಲ್ಲದೇ ಬೀಜದ ಪ್ರಮಾಣ ಕಡಿಮೆಗೊಳ್ಳುತ್ತದೆ.

ಈ ರೀತಿಯ ಜೋಡು ಸಾಲುಗಳನ್ನು ಹಗುರ ಮಣ್ಣಿನಲ್ಲಿ 2.5–5–2.5 ಅಡಿ ಅಂತರದಲ್ಲಿ ಹಾಗೂ ಕಪ್ಪು ಮಿಶ್ರಿತ ಫಲವತ್ತತೆಯ ಜಮೀನಿನಲ್ಲಿ 3–6–3 ಅಡಿ ಅಂತರದಲ್ಲಿ ಕೈಕೊಳ್ಳುವದು ಉತ್ತಮವೆನಿಸಿದೆ. ಈ ತರಹದ ಸಾಲಿನ ಪದ್ಧತಿಯಲ್ಲಿ ಹೆಚ್ಚಿನ ಇಳುವರಿ ಪಡೆಯಲು ಮತ್ತು ಗೊಬ್ಬರದ ಬಳಕೆ ಮತ್ತು ಅವುಗಳ ನಿರ್ವಹಣೆ ಬಹಳ ಕ್ಲೀಷ್ಟಕರವಾಗಿದೆ.

**ಅಗಲು ಸಾಲಿನ ಪದ್ಧತಿ :**

ಉಷ್ಣಾಂಶ ವಲಯದ ವಾತಾವರಣದಲ್ಲಿ ಹೆಚ್ಚು ಮರಿ ಒಡೆಯುವ ವಾತಾವರಣವಿರುವುದರಿಂದ ಹಾಗೂ ಬೀಜದ ಬಳಕೆಯನ್ನು ಕಡಿಮೆಗೊಳಿಸಿ ಹೆಚ್ಚು ಇಳುವರಿ ಪಡೆಯುವ ದೃಷ್ಟಿಯಿಂದ ಈ ಕೆಳಗಿನ ಸಾಲಿನ ಅಂತರವನ್ನು ಕಬ್ಬಿನ ತಳಿಗಳನುಗುಣಸಾರವಾಗಿ ಅಳವಡಿಸಬಹುದಾಗಿದೆ.

| ಮಣ್ಣಿನ ಗುಣಧರ್ಮ | ತಳಿ | ಸಾಲಿನ ಅಂತರ |
|---|---|---|
| ಕಪ್ಪು ಹಾಗೂ ಫಲಪ್ರದಾಯಕ ಜಮೀನು | ಸಿಓ 86032 | 5 ಅಡಿ |
| | ಸಿಓ 94012 | 4 ಅಡಿ |
| | ಸಿಓಸಿ 671 | 4 ಅಡಿ |
| | ಸಿಓ 62175 | 5 ಅಡಿ |
| ಹಗರು ಮತ್ತು ಮಧ್ಯಮ ಜಮೀನು | ಸಿಓ 86032 | 4 ಅಡಿ |
| | ಸಿಓ 94012 | 3 ಅಡಿ |
| | ಸಿಓಸಿ 471 | 3 ಅಡಿ |
| | ಸಿಓ 62175 | 4 ಅಡಿ |

ಈ ಸಾಲಿನ ಪದ್ಧತಿಯಿಂದ ನಾಟಿ ಮಾಡಿ ಉತ್ತಮ ಇಳುವರಿ ಪಡುವುದಲ್ಲದೇ ಅಗಲು ಸಾಲಿನಿಂದ ದೊರೆಯುವ ಸ್ಥಳಾವಕಾಶವನ್ನು ಆಯಾ ಹವಾಗುಣಕ್ಕನುಗುಣವಾಗಿ ವಿವಿಧ ಅಂತರ ಬೆಳೆಗಳನ್ನು ಬೆಳೆಯಲು ಉಪಯೋಗಿಸಬಹುದಾಗಿದೆ. ಇದರ ಪ್ರತಿ ಎಕರೆಗೆ ಬರುವ ನಿವ್ವಳ ಲಾಭವನ್ನು ಹೆಚ್ಚಿಸಲು ಅನುಕೂಲವಾಗುವುದು.

ಮಣ್ಣು ಎರಿಸುವುದು:

ಕಬ್ಬಿನ ಬೇರು ಮತ್ತು ಮರಿಗಳ ಬೆಳೆವಣಿಗೆಗಳಿಗೆ ಉತ್ತಮ ತೇವಾಂಶವಿದ್ದ ಸಮಯದಲ್ಲಿ ಗೊಬ್ಬರ ಹಾಕಿ ಸೂಕ್ತವಾದ ಸಲಕರಣೆಯಿಂದ 6–7 ಇಂಚದ ಎತ್ತರಕ್ಕೆ ಕಬ್ಬಿನ ಸಸಿಗಳ ಬದಿಯಲ್ಲಿ ಮಣ್ಣನ್ನು ಎರಿಸಬೇಕು. ಇದರಿಂದ ಮರಿ ಸಂಖ್ಯೆ ಜಾಸ್ತಿಯಾಗುವುದಲ್ಲದೆ ಬೇರು ಕೊರೆಯುವ ಹುಳದ ಭಾದೆ ಕಡಿಮೆಯಾಗುವುದು. ಕಬ್ಬು ತನ್ನ ವಿವಿಧ ಹಂತದ ಬೆಳವಣಿಗೆ ಕಾಲದಲ್ಲಿ ಬೀಳುವ ಸಂಭವವಿರುತ್ತದೆ. ಇದನ್ನು ತಪ್ಪಿಸಲು ಹಾಗೂ ಕಬ್ಬಿನ ಎಲ್ಲ ಬೆಳವಣಿಗೆ ಹಂತದಲ್ಲಿ ಸರಿಯಾಗಿ ಆಹಾರ ಮತ್ತು ನೀರನ್ನು ಪೂರೈಸಿ ತಡವಾಗಿ ಬರುವ ಮರಿಗಳನ್ನು ತಡೆಗಟ್ಟಲು ಯೋಗ್ಯವಾದ ಉಪಕರಣದಿಂದ ಮಗ್ಗಲು ಎರಿಸುವುದು ಅವಶ್ಯಕತೆ ಇರುತ್ತದೆ. ಇದನ್ನು ಸಾಲಿನ ಅಂತರಗಳನ್ನು ಗಮನಿಸಿ ಸರಿಯಾದ ಕ್ರಮ ಜರುಗಿಸುವುದು ಸೂಕ್ತವೆನಿಸಿದೆ.



ಚಿತ್ರ2:ಕಬ್ಬು ನಾಟಿ ಮಾಡುವುದಕಿಂತ ಮುಂಚೆ ರೆಂಟಯ\ಮುಖಾಂತರ ಗೊಬ್ಬರಗಳ ಮಿಶ್ರಣದ ಬಿತ್ತನೆ.

ಹುಸಿ ತುಂಬುವದು :

ಹಲವಾರು ಕಾರಣಗಳಿಂದ ಕಬ್ಬಿನ ಹುಸಿ ಕಾಣಿಸಿಕೊಳ್ಳವದು ಸ್ವಾಭಾವಿಕ ಅದರಲ್ಲೂ ಹೆಚ್ಚು ಸಾಲಿನ ಅಂತರವಿರುವ ಕಬ್ಬಿನಲ್ಲಿ ಇದು ಅತೀ ಕ್ಲಿಷ್ಟವೆನೆಸಿದೆ. ಹುಸಿ ತುಂಬಲು ಕಬ್ಬು ನಾಟಿ ಮಾಡುವ ಸಮಯದಲ್ಲಿ ಹೆಚ್ಚಿನ ಪ್ರಮಾಣದ ಬೀಜ ಸಸಿಗಳನ್ನು ತಯಾರಿಸಬೇಕು. ಅಂದರೆ ಇದನ್ನು ಪ್ಲಾಸ್ಟಿಕ ಚೀಲದಲ್ಲಿ ತಯಾರಿಸಿದ ಸಸಿಗಳ ಮುಖಾಂತರ ಮಾಡಬಹುದು ಅಥವಾ ಪ್ರತಿ 10–12 ಸಾಲಿಗೆ ನಾಟಿ ಮಾಡುವಾಗಲೇ ಒಂದು ಕಬ್ಬಿನ ಸಾಲನ್ನು ಖಾಯಂ ಇರುವ ಸಾಲದ ಜೊತೆಗೆ ಒಂದು ಜಾಸ್ತಿ ಸಾಲನ್ನು ಹಾಕಿ ಈ 10–12 ಸಾಲಿನಲ್ಲಿ ಆಗಿರುವ ಹುಸಿಯನ್ನು ಈ ಜಾಸ್ತಿ ಇರುವ ಸಾಲಿನಿಂದ ಬಳಸಿಕೊಳ್ಳಬಹುದಾಗಿದೆ.

ನೀರಾವರಿ ಮತ್ತು ಅಂತರ ಬೇಸಾಯ :

ಹವಾಗುಣಕ್ಕನುಗುಣವಾಗಿ ಮರಳು ಮಿಶ್ರಿತ ಭೂಮಿಯಲ್ಲಿ 8–10 ದಿನಗಳ ಮತ್ತು ಕಪ್ಪು ಭೂಮಿಯಲ್ಲಿ 10–15 ದಿನಗಳಿಗೊಮ್ಮೆ ನೀರು ಹಾಯಿಸಬೇಕು. ಬೇಸಿಗೆಯಲ್ಲಿ ನೀರಿನ ಅಭಾವವೆನಿಸಿದರೆ ಒಂದು ಸಾಲನ್ನು ಬಿಟ್ಟ ಮತ್ತೊಂದು ಸಾಲಿಗೆ ನೀರು ಹರಿಸಬೆಕು ತದನಂತರ ನೀರು ಕೊಡದೇ ಇರುವ ಸಾಲಿಗೆ ನೀರು ಹರಿಸಿ ಉಳಿದ ಸಾಲಗಳನ್ನು ಬಿಟ್ಟು ನೀರು ಹಾಯಿಸುವುದರಿಂದ ಕಬ್ಬಿನ ಇಳುವರಿಯ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ. ಕಬ್ಬಿನಲ್ಲಿ ಸೋಯಾ ಅವರೆ, ಹುರುಳಿ, ಈರುಳ್ಳಿ, ಆಲೂಗಡ್ಡೆ ಅಥವಾ ಅಲ್ಪಾವಧಿ ತರಕಾರಿ ಬೆಳೆಗಳನ್ನು ಅಂತರ ಬೆಳೆಯಾಗಿ ಬೆಳೆದು ಹೆಚ್ಚಿನ ಆದಾಯ ಪಡೆಯಲು ಸಾಧ್ಯವಾಗುವದು. ದ್ವಿಧಳ ಧಾನ್ಯದ ಬೆಳೆಗಳನ್ನು ಆರಿಸುವದು ಸೂಕ್ತವೆನಿಸಿದೆ. (ಚಿತ್ರವನ್ನು ಗಮನಿಸಿ).



ಚಿತ್ರ 3 : ಕಬ್ಬಿನಲ್ಲಿ ಜೋಡು ಸಾಲು ಪದ್ದತಿಯಲ್ಲಿ ಈರುಳ್ಳಿಯ ಅಂತರ ಬೇಸಾಯ

ಈ ಮೇಲಿನ ಬೇಸಾಯದ ಕ್ರಮಗಳ ಜೊತೆಗೆ ಸಮಗ್ರ ಕಸ, ಕೀಟ ಮತ್ತು ರೋಗಗಳ ಹತೋಟಿಗಳನ್ನು ಕಾಲಾನುಸಾರವಾಗಿ ಕೈಗೊಳ್ಳುವ ಅವಶ್ಯಕತೆ ಇದೆ. ಕಾರಣ ಇಂತಹ ಸುಧಾರಿತ ಬೇಸಾಯ ಕ್ರಮಗಳನ್ನು ವೇಳೆಗೆ ಸರಿಯಾಗಿ ಕಬ್ಬಿನಲ್ಲಿ ಅಳವಡಿಸಿದರೆ ಎಕರೆಗೆ 40,000 ರಿಂದ 50,000ಗಳವರೆಗೆ ಸಸ್ಯ ಸಂಖ್ಯೆಯನ್ನು ಕಾಪಾಡುವುದರ ಜೊತೆಗೆ ಪ್ರತಿ ಕಬ್ಬಿನ ತೂಕವನ್ನು 1 ರಿಂದ 1.5 ಕಿ.ಲೋದವರೆಗೆ ಹೆಚ್ಚಿಸಿ ಪ್ರತಿ ಎಕರೆಗೆ ಸರಳವಾದ 60 ರಿಂದ 75 ಮೆ.ಟನದಷ್ಟು ಕಬ್ಬಿನ ಇಳುವರಿಯನ್ನು ಪಡೆಯಲು ಯಾವ ಸಂದೇಹವಿಲ್ಲ. ಇದರಿಂದ ಕಬ್ಬಿನಿಂದ ಬರುವ ನಿವ್ವಳ ಲಾಭವು ಹೆಚ್ಚಾಗಿ ರೈತರಿಗೆ ಅನುಕೂಲವಾಗುವುದರ ಜೊತೆಗೆ ಸಕ್ಕರೆ ಕಾರ್ಖಾನೆಗಳು ಕೂಡಾ ಉತ್ತಮ ಗುಣಧರ್ಮವುಳ್ಳ ಕಬ್ಬು ಹೆಚ್ಚಿಗೆ ದೊರೆಯುವುದು.

**ಕಬ್ಬಿಗೆ ಶಿಫಾರಸ್ಸು ಮಾಡಿದ ರಸಾಯನಿಕ ಗೊಬ್ಬರಗಳನ್ನು ಈ ಕೆಳಗೆ ಕಾಣಿಸಿದ ವಿವಿಧ ರಸಾಯನಿಕ ಗೊಬ್ಬರಗಳನ್ನು ಆಯಾ ಹ**

| ವಿವರ | ನೇರ ರಸಾಯನಿಕ ಗೊಬ್ಬರಗಳ ಶಿಫಾರಸ್ಸು (50 ಕಿಲೋ ಚೀಲದಲ್ಲಿ) | | | | ಸಂಯುಕ್ತ ರಸಾಯನಿಕ ಗೊಬ್ಬರಗಳ ಶಿಫಾರಸ್ಸು (50 ಕಿಲೋ ಚೀಲದಲ್ಲಿ) | | | | ಸಂಯುಕ್ತ ರಸಾಯನಿಕ ಗೊಬ್ಬರಗಳ ಶಿಫಾರಸ್ಸು (50 ಕಿಲೋ ಚೀಲದಲ್ಲಿ) | | |
|---|---|---|---|---|---|---|---|---|---|---|---|
| | ಯೂರಿಯಾ | ಸುಪರ ಪಾಸ್ಫೇಟ್ | ಮ್ಯೂರೇಟ್ ಆಫ್ ಪೋಟ್ಯಾಷ | | ಯೂರಿ0ಯಾ | ಡಿ.ಎ.ಪಿ | ಮ್ಯೂರೇಟ್ ಆಫ್ ಪೋಟ್ಯಾಷ | | ಯೂರಿ0ಯಾ | 10:26:26 | ಮ್ಯೂರೇಟ್ ಆಫ್ ಪೋಟ್ಯಾಷ |
| ಪೂರ್ವ ವರ್ಷದ/ಹಂಗಾಮು 1) ನಾಟಿ ಸಮಯದಲ್ಲಿ | 0.5 | 2 | 1.5 | ಅ | 0 | 1 | 1.5 | ಅ | – | 1.5 | 1 |
| 2) 6–8 ವಾರಗಳ ನಂತರ | 1 | – | – | ಥ | 1.5 | – | – | ಥ | 1 | – | – |
| 3) 12–14 ವಾರಗಳ ನಂತರ | 1 | – | – | ವಾ | 1.5 | – | – | ವಾ | 1 | – | – |
| 4) 20ನೇ ವಾರದಲ್ಲಿ | 2 | 2 | 1.5 | | 1 | 1 | 1.5 | | 2 | 1.5 | 1 |
| ಒಟ್ಟು ಚೀಲಗಳು | 4.50 | 4.00 | 3 | | 4 | 2 | 3 | | 4 | 3 | 2 |
| ವರ್ಷದ ಕಬ್ಬು/ಕುಳೆ ಮಗ್ಗಲು ಹರಿಸುವಾಗ 1) ನಾಟಿ ಸಮಯದಲ್ಲಿ | 0.5 | 2 | 1.5 | | – | 1 | 1 | | – | 1.5 | 1 |
| 2) 6–8 ವಾರಗಳ ನಂತರ | 1.0 | – | – | | 1 | – | – | | 1 | – | – |
| 3) 12–14 ವಾರಗಳ ನಂತರ | 1.0 | – | – | | 1.5 | – | – | | 1.5 | – | – |
| 4) 20 ನೇ ವಾರದಲ್ಲಿ | 1.5 | 2 | 1.5 | | 1.5 | 1.5 | 1.5 | | 1.5 | 1.5 | 1 |
| ಒಟ್ಟು ಚೀಲಗಳು | 4.00 | 4 | 3.5 | | 4 | 2.5 | 2.5 | | 4 | 3.00 | 2 |